ಈ ದಿನ ದಿನಾಂಕಃ- 19-06-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಶ್ರೀ **ಎಸ್ ಎ ಕೆ ವಕೀ**ಲರಿಂದಃ

ಈ ದಾವೆಯನ್ನು ಯಾರ ಮೇಲೆ ಹಾಗೂ ಯಾವ ಪರಿಹಾರ ಕೋರಿ ಸಲ್ಲಿಸಿರುತ್ತೇನೆಂದು ನನಗೆ ಹೇಳಲಾಗುವುದಿಲ್ಲ. ದಾವಸ್ವತ್ತಿನ ಖಾತೆ ನಂ 37/3 ಇದೆ. ದಾವಸ್ವತ್ತಿನ ವಿಸ್ತೀರ್ಣ ಪೂರ್ವ-ಪಶ್ಚಿಮ 40 ಅಡಿ ಮತ್ತು ಉತ್ತರ-ದಕ್ಷಿಣ 140 ಅಡಿ ಇದೆ. ದಾವಸ್ವತ್ತಿನ ಚಕ್ಕುಬಂದಿ ನನಗೆ ಹೇಳಲಾಗುವುದಿಲ್ಲ. 2 ನೇ ವಾದಿ ಚಿಕ್ಕವೀರಪ್ಪ ನನ್ನ ಅಣ್ಣನಾಗಬೇಕು. 2ನೇ ವಾದಿ ಅವರ ಪರವಾಗಿ ಸಾಕ್ಷ್ಯ ಹೇಳಲು ನನಗೆ ಅಧಿಕಾರ ಪತ್ರವನ್ನು ನೀಡಿಲ್ಲ. ದಾವಸ್ವತ್ತು ಮೂಲತಃ ಯಾರಿಗೆ ಸೇರಿದ್ದು ಎಂಬುದು ಹೇಳಲಾಗುವುದಿಲ್ಲ ಸಾಕ್ಷಿ

ಪುನಃ ದಾವಸ್ವತ್ತು ಮೂಲತಃ ಬಾಲರಾಜುರವರಿಗೆ ಸೇರಿದ್ದು ಅ ನಂತರ ಬಸವರಾಜುರವರಿಗೆ ಬಂದಿರುತ್ತದೆ. ಬಸವರಾಜುರವರಿಂದ ರಮೇಶ್‌ರವರಿಗೆ ಬಂ ದಿರುತ್ತದೆ. ದಾವಸ್ವತ್ತು 1960 ರಲ್ಲಿ ಕಂದಾಯ ಜಮೀನಾಗಿತ್ತೆಂದರೆ ಸರಿ. ಅಗ ದಾವಸ್ವತ್ತಿನ ಸರ್ವೆ ನಂ 37 ಅಗಿತ್ತೆಂದರೆ ಸರಿ. ಸರ್ವೆ ನಂ 37 ಪೋಡಿಯಾಗಿ 37/3ಎ ಮತ್ತು 37/3ಬಿ ಅಗಿರುತ್ತದೆಂದರೆ ಸರಿ. ಸರ್ವೆ ನಂ 37 ರಲ್ಲಿ 2 ಎಕರೆ 27 ಗುಂಟೆ ಜಮೀನಿದೆ ಎಂದರೆ ಸರಿಯಲ್ಲ.

ದಾವಸ್ವತ್ತು ಮೂಲತಃ ಫಾತಿಮಾಬೀ ಕೋಂ ಹುಸೇನ್‌ಸಾಬ್‌ರವರಿಗೆ ಸೇರಿದ ಸ್ವತ್ತಾಗಿತ್ತೆಂದರೆ ಸರಿಯಲ್ಲ. 1963 ರಲ್ಲಿ ಫಾತಿಮಾಬೀರವರು ಸರ್ವೆ ನಂ 37 ರಲ್ಲಿ ಪೂರ್ವ ಪಶ್ಚಿಮ 140 ಅಡಿ ಮತ್ತು ಉತ್ತರ ದಕ್ಷಿಣ 136 ಅಡಿ ಸ್ವತ್ತನ್ನು ಮಹಮ್ಮದ್‌ಖಾನ್ ಬಿನ್ ಹುಸೇನ್‌ಸಾಬ್‌ರವರಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. 1963 ರಲ್ಲಿ

ದಾವಸ್ವತ್ತು ದೊಡ್ಡಬಳ್ಳಾಪುರದ ಪುರಸಭೆ ವ್ಯಾಪ್ತಿಗೆ ಬಂದ ಕಾರಣ ಮಹಮ್ಮದ್‌ಖಾನ್‌ರವರ ಹೆಸರಿಗೆ ಪುರಸಭೆಯಲ್ಲಿ ಖಾತೆಯಾಗಿರುತ್ತದೆಂದರೆ ಸರಿಯಲ್ಲ. ಮಹಮ್ಮದ್‌ಖಾನ್‌ರವರು ಮೃತಪಟ್ಟ ಬಳಿಕ ಸದರಿ ಸ್ವತ್ತು ಅವರ ಮಗ ನಯಾಜ್‌ಖಾನ್‌ರವರಿಗೆ ಖಾತೆಯಾಗಿರುತ್ತದೆಂದರೆ ಸರಿಯಲ್ಲ. ಮೇಲೆ ಹೇಳಿದಂತಹ ಎಲ್ಲಾ ವಿಚಾರಗಳಿಗೆ ಸಂಬಂಧಿಸಿದಂತಹ ದಾಖಲಾತಿಗಳನ್ನು ಪ್ರತಿವಾದಿಯರು ನ್ಯಾಯಾಲಯದಲ್ಲಿ ಹಾಜರು ಪಡಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯರು ಪ್ರಸ್ತು ತ ದಾವೆಯಲ್ಲಿ ಹಾಜರು ಪಡಿಸಿದಂತಹ ದಾಖಲಾತಿಗಳನ್ನು ನಾನು ಓದಿಸಿ ತಿಳಿದುಕೊಂಡಿಲ್ಲ. ಪ್ರತಿವಾದಿಯರು ಪ್ರಸ್ತುತ ದಾವೆಯಲ್ಲಿ ಹಾಜರು ಪಡಿಸಿದಂತಹ ದಾಖಲಾತಿಗಳನ್ನು ನಮ್ಮ ವಕೀಲರ ಮೂಲಕ ಓದಿಸಿ ತಿಳಿದುಕೊಳ್ಳಲು ನನಗೆ ತೊಂದರೆ ಇಲ್ಲ.

ದಾವಸ್ವತ್ತು ಸಿ ಎ ಬಾಲನ್ ಅಲಿಯಾಸ್ ಬಾಲರಾಜುರವರಿಗೆ ಹೇಗೆ ಬಂದಿರುತ್ತದೆಂಬುದು ನನಗೆ ಗೊತ್ತಿಲ್ಲ. ಬಾಲನ್ ಹೆಸರಿಗೆ ದಾವಸ್ವತ್ತಿನ ಖಾತೆ ಇದ್ದ ಬಗ್ಗೆ ದಾಖಲಾತಿಯನ್ನು ನೋಡಿಲ್ಲ. ಬಾಲನ್‌ರವರು ಸ್ವತ್ತನ್ನು ಹೆಚ್ ಬಿ ಬಸವರಾಜುರವರಿಗೆ ಯಾವಾಗ ಮಾರಾಟ ಮಾಡಿರುತ್ತಾರೆಂಬುದು ನನಗೆ ಗೊತ್ತಿಲ್ಲ. ಬಸವರಾಜುರವರ ಹೆಸರಿಗೆ ದಾವಸ್ವತ್ತು ಖಾತೆಯಾಗಿರುವ ಬಗ್ಗೆ ದಾಖಲಾತಿಯನ್ನು ನಾನು ನೋಡಿಲ್ಲ. ದಾವಸ್ವತ್ತು ಬಾಲನ್ ಮತ್ತು ಬಸವರಾಜುರವರಿಗೆ ಹೇಗೆ ಬಂದಿರುತ್ತದೆಂಬುದನ್ನು ತಿಳಿದುಕೊಳ್ಳಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಬಾಲನ್ ಮತು ಬಸವರಾಜುರವರ ಹೆಸರಿನಲ್ಲಿರುವ ದಾವಸ್ವತ್ತಿಗೆ ಸಂಬಂಧಿಸಿದ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನಾನು ನ್ಯಾಯಾಲಯಕ್ಕೆ ಯಾವ ದಾಖಲಾತಿಗಳನ್ನು ಹಾಜರು ಪಡಿಸಿರುತ್ತೇನೆಂದು ನನಗೆ ಹೇಳಲಾಗುವುದಿಲ್ಲ.

ಸರ್ವೆ ನಂ 37 ರ ಜಮೀನು ಅರಳುಮಲ್ಲಿಗೆ ಗ್ರಾಮಕ್ಕೆ ಸೇರಿದ ಸ್ವತ್ತಾಗಿರುತ್ತದೆ. ನನ್ನ ಹೆಸರಿಗೆ ಅರಳುಮಲ್ಲಿಗೆ ಗ್ರಾಮಪಂಚಾಯ್ತಿಯಲ್ಲಿ ಖಾತೆಯಾಗಿತ್ತು. ಈ ಬಗ್ಗೆ ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲ. ಸರ್ವೆ ನಂ 37/1 ರ ಜಮೀನು ಅರಳು ಮಲ್ಲಿಗೆ ಗ್ರಾಮಕ್ಕೆ ಸೇರಿಲ್ಲ ಎಂದರೆ ಸರಿಯಲ್ಲ. ದಾವಸ್ವತ್ತು ಯಾವತ್ತಿಗೂ ಬಾಲರಾಜು ಮತ್ತು ಬಸವರಾಜುರವರಿಗೆ ಸೇರಿದ ಸ್ವತ್ತಾಗಿರಲಿಲ್ಲ ಎಂದರೆ ಸರಿಯಲ್ಲ. ನಾನು ರಮೇಶ್‌ಬಾಬು ಮತ್ತು ಬಲರಾಮ್‌ಶೆಟ್ಟಿರವರನ್ನು ನೋಡಿರುತ್ತೇನೆ. ಅವರು ದೊಡ್ಡಬಳ್ಳಾಪುರದವರು. ಅವರಿಬ್ಬರೂ ತುಮಕೂರಿಗೆ ಹೋಗಿ ಸುಮಾರು 40-45 ವರ್ಷಗಳಾಗಿರುತ್ತವೆ. ದಾವಸ್ವತ್ತು ಅವರಿಬ್ಬರಿಗೆ ಹೇಗೆ ಬಂದಿರುತ್ತದೆಂದರೆ ಸಾಕ್ಷಿ ಬಸವರಾಜುರವರಿಂದ ದಾವಸ್ವತ್ತು ಅವರಿಬ್ಬರಿಗೆ ಬಂದಿರುತ್ತದೆಂದು ನುಡಿಯುತ್ತಾರೆ. ರಮೇಶ್‌ಬಾಬು ಮತ್ತು ಬಲರಾಮ್‌ಶೆಟ್ಟಿರವರು ದಾವಸ್ವತ್ತನ್ನು 1968 ರಲ್ಲಿ ಕ್ರಯಕ್ಕೆ ಪಡೆದಿರುತ್ತಾರೆ. ದಾವಸ್ವತ್ತನ್ನು ಕ್ರಯಕ್ಕೆ ಪಡೆದುಕೊಂಡ ಬಗ್ಗೆ ಅವರ ಹೆಸರಿಗೆ ರಮೇಶ್‌ಬಾಬು ಮತ್ತು ಬಲರಾಮ್‌ಶೆಟ್ಟಿರವರು ಖಾತೆಯನ್ನು ಮಾಡಿಸಿಕೊಂಡಿಲ್ಲ. ನಾನು ದಾವಸ್ವತ್ತನ್ನು ರಮೇಶ್‌ಬಾಬು ಮತ್ತು ಬಲರಾಮ್‌ಶೆಟ್ಟಿರವರಿಂದ 1978 ರಲ್ಲಿ ಕ್ರಯಕ್ಕೆ ಪಡೆದಿರುತ್ತೇನೆ. ದಾವಸ್ವತ್ತಿಗೆ ನನ್ನ ಹೆಸರು 2002 ರಲ್ಲಿ ಖಾತೆಯಾಗಿರುತ್ತದೆ. 1978 ರಿಂದ 2002 ರವರೆಗೂ ದಾವಸ್ವತ್ತಿನ ಖಾತೆ ಸಿ.ಚಿಕ್ಕವೀರಪ್ಪ ಮತ್ತು (ನನ್ನ) ರಮೇಶ್‌ರವರ ಹೆಸರಿನಲ್ಲಿತ್ತು. 1978 ರಿಂದ 2002 ರವರೆಗೆ ದಾವಸ್ವತ್ತು ನನ್ನ ಮತ್ತು ಚಿಕ್ಕವೀರಪ್ಪರವರ ಹೆಸರಿನಲ್ಲಿದ್ದ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನಮ್ಮಿಬ್ಬರ ಹೆಸರಿನಲ್ಲಿರುವ ಯಾವ ದಾಖಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆಂದು ನನಗೆ ಹೇಳಲಾಗುವುದಿಲ್ಲ.

ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.
(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು
ದೊಡ್ಡಬಳ್ಳಾಪುರ